

**15** ಆಂಡಾಳ್ ವ್ರತವನ್ನು ಆರಂಭಿಸಿದಳು. ಈ ಸಮಯದಲ್ಲಿ ಅವಳು, ಶ್ರೀವಿಲ್ಲಿಪುತ್ತೂರು ಗ್ರಾಮವನ್ನೇ ಗೋಕುಲವೆಂದು ಭಾವಿಸಿದಳು. ಗ್ರಾಮದ ಹೆಣ್ಣುಮಕ್ಕಳೇ ಗೋಪಿಯರೆಂದು ಯೋಚಿಸಿದಳು. ತಾನೇ ಅವರೆಲ್ಲರ ನಾಯಕಿ ಎಂದು ಪರಿಗಣಿಸಿಕೊಂಡಳು. ಅವಳು ಮುಂಜಾನೆಯೇ ಮನೋಹರವಾದ 'ತಿರುಪ್ಪಾವೈ' ಎಂಬ ಸ್ತೋತ್ರವನ್ನು ಹಾಡುತ್ತ, ತನ್ನ ಗೆಳತಿಯರನ್ನೆಲ್ಲ ಎಬ್ಬಿಸುವಳು.




**16** ವಿಷ್ಣುಚಿತ್ತರು ತಮ್ಮ ಮಗಳು ದಿನೇ ದಿನೇ ಸಣ್ಣಗಾಗುತ್ತಿರುವುದನ್ನು ಮತ್ತು ದುರ್ಬಲಳಾಗುತ್ತಿರುವುದನ್ನು ಗಮನಿಸಿದರು. ಅದಕ್ಕೆ ಕಾರಣವನ್ನು ಕೇಳಿದರು.




**17** ಅಂದಿನ ರಾತ್ರಿ, ಶ್ರೀರಂಗನಾಥನು ವಿಷ್ಣುಚಿತ್ತರ ಕನಸಿನಲ್ಲಿ ಬಂದು ಹೀಗೆ ಹೇಳಿದನು.

